ಈ) ಗೋತಳಿ ಸಂರಕ್ಷಣೆಗೆ ಯೋಜನೆ ರೂಪಿಸಿದಂತೆ ಎಮ್ಮೆ ತಳಿ ರಕ್ಷಣೆಗೆ ಯಾವುದೇ ವಿಶೇಷ ಯೋಜನೆ ರೂಪಿಸಲಾಗಿಲ್ಲ ಆದರೆ ಈ ಎಮ್ಮೆ ತಳಿಗಳ ಸಂವರ್ಧನೆಗಾಗಿ ಸೂರ್ತಿ ಮತ್ತು ಮುರ್ರಾ ಘನೀಕೃತ ವೀರ್ಯನಳಿಕೆಗಳನ್ನು ರಾಜ್ಯದಲ್ಲಿರುವ ಎಲ್ಲಾ ಪಶು ಚಿಕಿತ್ಸಾ ಕೇಂದ್ರಗಳಿಗೆ ಸರಬರಾಜು ಮಾಡಿ ಕೃತಕ ಗರ್ಭಧಾರಣೆ ಮುಖಾಂತರ ತಳಿ ಸಂವರ್ಧನೆಗೆ ಕ್ರಮವಹಿಸಲಾಗಿದೆ

ಉ) ಅನ್ವಯಿಸುವುದಿಲ್ಲ

630 (1135) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) – ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಈ ಹಿಂದೆ ಹೇಳಿಕೆ ನೀಡಿದಂತೆ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅನುಕಂಪದ ಆಧಾರದ ಮೇಲೆ 151 ಮಂದಿ ಅನರ್ಹರಿಗೆ ನೇಮಕಾತಿ ನೀಡಿದ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಪದೋನ್ನತಿಯನ್ನು ತನಿಖಾ ವರದಿ ಬರುವವರೆಗೂ ತಡೆಹಿಡಿಯಲಾಗಿದೆಯೇ ?

ಆ) ಸಿ ಓ ಡಿ ತನಿಖಾ ವರದಿಯನ್ನು ಮೂರು ತಿಂಗಳೊಳಗೆ ಪಡೆದು ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಾಗುವುದೆಂದು ಮಾನ್ಯ ಕಾರ್ಮಿಕ ಸಚಿವರು ಸದನದಲ್ಲಿ ಭರವಸೆ ನೀಡಿದ್ದು ಈ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಇ) ತನಿಖಾ ಸಂಸ್ಥೆಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿದೆಯೇ ? ಅಂತಿಮ/ಮಧ್ಯಂತರ ವರದಿ ಸಲ್ಲಿಸಿದ್ದಲ್ಲಿ ವರದಿಯಾನುಸಾರ ಪ್ರಕರಣದಲ್ಲಿ ಭಾಗಿಯಾಗಿರುವವರ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಈ) ವರದಿ ಇನ್ನೂ ಬಾರದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು , ತನಿಖೆ ಪೂರ್ಣಗೊಳ್ಳದೆ ಹಾಗೂ ತನಿಖಾ ವರದಿಯನ್ನು ಪಡೆಯದೆ ತಪ್ಪಿತಸ್ಥ ಅಧಿಕಾರಿಗಳಿಗೆ ಬಡ್ತಿ ನೀಡಲಾಗಿರುವುದು ಅಲ್ಲದೆ, ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದು ನಿಜವೇ?

ಉ) ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲಾ ಅಧಿಕಾರಿಗಳನ್ನು ಅಮಾನತುಗೊಳಿಸುವುದರ ಬದಲಿಗೆ ವಿಚಾರಣೆ ಪೂರ್ಣಗೊಳ್ಳುವ ಮೊದಲೇ ಇವರುಗಳಿಗೆ ಬಡ್ತಿ ನೀಡಿ ಅದೇ ಸ್ಥಳಗಳಲ್ಲಿ ಮುಂದುವರೆಸಿರುವುದೇ ತನಿಖೆ ವಿಳಂಬಗೊಳ್ಳಲು ಪ್ರಮುಖ ಕಾರಣವಾಗಿರುತ್ತದೆ ಎಂಬುದು ನಿಜವೇ ?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು) –

ಅ) ಲಭ್ಯವಿರುವ ಮಾಹಿತಿ ಪ್ರಕಾರ ಈ ರೀತಿ ಹೇಳಿಕೆ ನೀಡಿರುವುದಿಲ್ಲ

ಇಲ್ಲ

ಆ) 3 ತಿಂಗಳೊಳಗಾಗಿ ವರದಿ ನೀಡುವಂತೆ ಸಿ ಒ ಡಿ ಗೆ ಆದೇಶಿಸಲಾಗಿದೆ ತನಿಖೆ ಪ್ರಗತಿಯಲ್ಲಿದೆ

ಇ) ಇಲ್ಲ

ಈ) 151 ಅಭ್ಯರ್ಥಿಗಳ ಪೈಕಿ 140 ಅಭ್ಯರ್ಥಿಗಳನ್ನು ವಿಚಾರಿಸಲಾಗಿದೆ ಉಳಿದ ಅಭ್ಯರ್ಥಿಗಳನ್ನು ಪತ್ತೆ ಮಾಡಬೇಕಾಗಿರುವುದರಿಂದ ಮತ್ತು ವಿಚಾರಣೆಗೋಸ್ಕರ ಇನ್ನು ಹೆಚ್ಚು ಮಾಹಿತಿ ಸಂಗ್ರಹಿಸಬೇಕಾಗಿರುವುದರಿಂದ ತನಿಖೆ ವಿಳಂಬವಾಗಿದೆ

ಇಲಾಖೆಯ ಅಧಿಕಾರಿಗಳು ಭಾಗಿಯಾಗಿರುವ ಬಗ್ಗೆ ತನಿಖಾ ವರದಿ ಬಂದಿರುವುದಿಲ್ಲ ಯಾವುದೇ ಅಧಿಕಾರಿಗಳು ತಪ್ಪಿತಸ್ಥರೆಂದು ವರದಿಯಾಗಿರುವುದಿಲ್ಲದ ಕಾರಣ ಬಡ್ತಿ ನೀಡಿ ರಿಕ್ತ ಸ್ಥಾನಗಳಲ್ಲಿ ಅದೇ ಸ್ಥಳಗಳಲ್ಲಿ ಮುಂದುವರಿಸಲಾಗಿದೆ

ಉ) ಇಲ್ಲ

631 (915) ಶ್ರೀ ಗಡ್ಡದೇವರಮರ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಹಟ್ಟಿಯ ಮತಕ್ಷೇತ್ರದ ಯಳವತ್ತಿಯ ಆರೋಗ್ಯ ಕೇಂದ್ರಕ್ಕೆ ಮಂಜೂರಾದ ಕಟ್ಟಡದ ಅಂದಾಜು ಮೊತ್ತ ಎಷ್ಟು ,

ಆ) ಈ ಕಾಮಗಾರಿಯನ್ನು ಯಾರಿಗೆ ವಹಿಸಲಾಗಿದೆ ,

ಇ) ಈ ಕಾಮಗಾರಿಗಾಗಿ ಇಲ್ಲಿಯವರೆಗೆ ವಿನಿಯೋಗಿಸಲಾದ ಹಣ ಎಷ್ಟು

ಈ) ಕಾಮಗಾರಿಯು ಈಗ ಯಾವ ಹಂತದಲ್ಲಿದೆ ,

ಉ) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗಧಿ ಪಡಿಸಲಾದ ಕಾಲಾವದಿ ಎಷ್ಟು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) –

ಅ) ಶಿರಹಟ್ಟಿಯ ಮತಕ್ಷೇತ್ರದ ಯಳವತ್ತಿಯ ಆರೋಗ್ಯ ಕೇಂದ್ರಕ್ಕೆ ಮಂಜೂರಾದ ಕಟ್ಟಡಕ್ಕೆ ಅಂದಾಜು ಮೊತ್ತ 34 26 ಲಕ್ಷ ರೂ ಗಳು ಮಂಜೂರಾಗಿರುತ್ತದೆ

ಆ) ಈ ಕಾಮಗಾರಿಯನ್ನು ಗದಗ ಜಿಲ್ಲೆಯ ಕಾರ್ಯನಿರ್ವಾಹಕ ಅಭಿಯಂತರ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ವಹಿಸಲಾಗಿದೆ

ಇ) ಇಲ್ಲಿಯವರೆಗೆ ರೂ 10 24 ಲಕ್ಷ ಹಣ ವಿನಿಯೋಗಿಸಲಾಗಿದೆ

ಈ) ಪ್ಲಿಂತ್ ಹಂತದವರೆಗೆ ಕೆಲಸ ಆಗಿರುತ್ತದೆ

ಉ) 12 ತಿಂಗಳು (ಮಳೆಗಾಲ ಸೇರಿ)

ವಸತಿ ನಿಲಯಗಳಲ್ಲಿ ಪ್ರವೇಶಾವಕಾತವನ್ನು ಹೆಚ್ಚಿಸುವುದು

632 (916) ಶ್ರೀ ಗಡ್ಡದೇವರಮರ್ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ) – ಸಮಾಜ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಶಿರಹಟ್ಟಿ ಮತಕ್ಷೇತ್ರದಲ್ಲಿ ಇರುವ ಒಟ್ಟು ವಸತಿ ನಿಲಯಗಳೆಷ್ಟು

ಆ) ಹಿಂದುಳಿದ ವರ್ಗಗಳ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ವಿವರ ನೀಡುವುದು ,

ಇ) ಪ್ರತಿ ವಸತಿ ನಿಲಯಕ್ಕೆ ಮಂಜೂರಾದ ಪ್ರವೇಶ ಸಂಖ್ಯೆ ಎಷ್ಟು ,